ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **36/2019**

| | | |
|---|---|---|
| ಸಾಕ್ಷಿಯ ಹೆಸರುಃ | ಮೊಹನರೆಡ್ಡಿ | ಪ್ರಾಸಾಃ 5 |
| ತಂದೆ/ಗಂಡನ ಹೆಸರುಃ | ನವಾಜರೆಡ್ಡಿ | ಚಾಸಾಃ 7 |
| ವಯಸ್ಸು ಃ | 48 ವರ್ಷ | ದಿಃ 16-03-2026 |
| ಉದ್ಯೋಗಃ | ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು 2018 ರಿಂದ ಇಲ್ಲಿಯವವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಮುಖ್ಯ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 25-09-2018 ರಂದು ಚಾಸಾಃ 1 ರವರು ಲಿಖಿತ ದೂರು ನೀಡಿದ ಮೇರೆಗೆ ಸದರಿ ಆಧಾರದ ಮೇಲೆ ನಮ್ಮ ಠಾಣಾ ಗುನ್ನೆ ಸಂಖ್ಯೆ 174/2018 ನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ಪ್ರ. ವ. ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿ ನಿಪಿ-4(ಎ) ಎಂದು ಗುರುತಿಸಲಾಯಿತು. ದಿನಾಂಕಃ 26-09-2018 ರಂದು 12.00 ರಿಂದ 1.00 ಗಂಟೆಯವರೆಗೆ ನಿಪಿ-1 ರಂತೆ ಗುನ್ನೆ ಪಂಚನಾಮೆಯನ್ನು ಪಂಚರ ಸಮಕ್ಷಮದಲ್ಲಿ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಅದೆ ಸ್ಥಳದಲ್ಲಿ ನಿಪಿ-2 ರಂತೆ ಫೋಟೋ ತೆಗೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಚಾಸಾಃ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಿಪಿ-5 ರಂತೆ ದಿನಾಂಕಃ 25-10-2018 ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಲಯದ ಮುಂದೆ ಇರುವ ಮು. ಮಾ. 1 ನ್ನು ನೋಡಿ ಗುರತಿಸಿರುತ್ತಾರೆ. ದಿನಾಂಕಃ 27-11-2018 ರಂದು ನ್ಯಾಯಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ. ವಿ. ಆರ್. ಎಸ್, ವಕೀಲರಿಂದ.</u>

1. ಚಾಸಾ: 1 ರವರು ದೂರನ್ನು ನೀಡಲು ಸಂಜೆ: 6.35 ಗಂಟೆಗೆ ಬಂದಿರುತ್ತಾರೆ. ಚಾಸಾ: 1 ರವರಿಗೆ ರಕ್ತಗಾಯವಾಗಿರುತ್ತದೆ ಎಂದರೆ ಸಾಕ್ಷಿಯು ಒಳಪೆಟ್ಟಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ: 2 ರಿಂದ 4 ರವರು ಚಾಸಾ: 1 ರವರ ಕುಟುಂಬದವರು ಆಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ: 1 ರವರ ಜೊತೆಗೆ ಹೋಗಿರುವ ಪೊಲಿಸ ಪೇದೆ ವಿಚಾರಣೆ ಮತ್ತು ಸಾಕ್ಷಿಗೆ ಒಳಪಡಿಸಿರುವುದಿಲ್ಲ. ಮು. ಮಾ-1 ನ್ನು ಬಿಳಿ ಬಟ್ಟೆಯಲ್ಲಿ ಜಪ್ತಿ ಮಾಡಿರುತ್ತೇವೆ. ಚಸಾ: 1 ರವರಿಗೆ ಅನುಕೂಲವಾಗುವ ದೃಷ್ಟಿಯಿಂದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾನು ಯಾವುದೇ ಪಂಚನಾಮೆ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ: 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ